# ಸತ್ಯಾನ್ವೇಷಣೆಗೆ ನೂರು

ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಆತ್ಮಕಥೆ 'ಸತ್ಯಾನ್ವೇಷಣೆ' ಕೃತಿಗೆ ಈಗ ಶತಮಾನೋತ್ಸವ ಪರ್ವ. ಲೇಖಕ ಮೋಹನಚಂದ ಗಾಂಧಿ ಕೃತಿಯ ಮುನ್ನುಡಿಯಲ್ಲಿ ನಮೂದಿಸಿರುವಂತೆ 26ನೇ ನವೆಂಬರ್ 1925ರಲ್ಲಿ ಪ್ರಕಟವಾಯಿತು. ಮೂಲ ಗುಜರಾತಿ ಭಾಷೆಯಲ್ಲಿ ಇದನ್ನು 1925 ರಿಂದ 1928ರವರೆಗೆ 'ನವಜೀವನ' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿಸಿದ್ದರು. ಕೃತಿಯಾಗಿ 'ಸತ್ಯ ನೋ ಪ್ರಯೋಗ' ಎಂಬ ಶೀರ್ಷಿಕೆಯಲ್ಲಿ ಹೊರತಂದರು. ಮಹಾದೇವ ದೇಸಾಯಿ ಅದನ್ನು ಇಂಗ್ಲಿಷ್‌ಗೆ ಅನುವಾದಿಸಿದರು. ಆಗಿನ್ನು ಭಾರತದಲ್ಲಿ ಆತ್ಮಕಥೆಯನ್ನು ಬರೆದುಕೊಳ್ಳುವ ಪೃಥೆ ಇರಲಿಲ್ಲ. ಪಾಶ್ಚಾತ್ಯರಂತೆ ತಮ್ಮದೆ ಜೀವನ ಗಾಥೆಯನ್ನು ನಿಷ್ಠುರ ವಾಸ್ತವಗಳೊಂದಿಗೆ ಪೃಥಕ್ಕರಿಸುವುದು ನಮ್ಮವರಿಗೆ ಸಹಜ ಎನಿಸಿರಲಿಲ್ಲ. ನಮ್ಮಲ್ಲಿ ಜೀವನ ಚರಿತ್ರೆಗಳು ಸೃಷ್ಟಿಯಾಗುತ್ತಿದ್ದವೆ ಹೊರತು ಆತ್ಮಚರಿತ್ರೆಗಳನ್ನು ಬರೆದುಕೊಳ್ಳುವ ಕಾಲವಿನ್ನು ಪಕ್ವವಾಗಿರಲಿಲ್ಲ. ಅಷ್ಟಕ್ಕೂ ನಮ್ಮವರಿಗೆ ಚಾರಿತ್ರ್ಯ ಮುಖ್ಯವಾಗಿತ್ತೆ ಹೊರತು ಚರಿತ್ರೆಯಲ್ಲ. ಹೀಗಿರುವ ಹೊತ್ತಿನಲ್ಲಿಯೆ ಮೋಹನದಾಸ ಕರಮಚಂದ ಗಾಂಧಿ ತಮ್ಮ ಆತ್ಮಚರಿತ್ರೆ ಬರೆದುಕೊಳ್ಳಲು ಮನಸ್ಸು ಮಾಡಿದ್ದು ಭಾರತೀಯರಿಗೆ ಅಲಭ್ಯ ಲಭ್ಯವೆ ಆಗಿದೆ.

ಮಹಾತ್ಮಗಾಂಧಿಯವರ ಈ ಆತ್ಮಚರಿತ್ರೆ ಸ್ವಲ್ಪ ದಿನದಲ್ಲೇ ಅದೆಷ್ಟು ಪ್ರಸಿದ್ಧಿಗೆ ಬಂತೆಂದರೆ ಭಾರತದ ಎಲ್ಲ ಭಾಷೆಗಳೂ ಸೇರಿ ಜಾಗತಿಕ ಹಲವು ಭಾಷೆಗಳಿಗೂ ಇದು ಅನುವಾದಗೊಂಡಿತು. 20ನೇ ಶತಮಾನದ 100 ಶ್ರೇಷ್ಠ ಜಾಗತಿಕ ಕೃತಿಗಳಲ್ಲಿ 'ಸತ್ಯಾನ್ವೇಷಣೆ'ಯೂ ಒಂದು. ಇದು ಜಗತ್ತಿನ ಹಲವು ಸರ್ವಶ್ರೇಷ್ಠ ಸತ್ಯಾಗ್ರಹಿ ಹೋರಾಟಗಾರರ ಮೇಲೆ ಗಾಢ ಪರಿಣಾಮ ಬೀರಿದೆ. ಕರಿಯರ ಹಕ್ಕುಗಳಿಗಾಗಿ ಸುದೀರ್ಘ ಹೋರಾಟ ನಡೆಸಿದ ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್ ಮತ್ತು ದಕ್ಷಿಣ ಆಫ್ರಿಕಾದ ದಣಿವರಿಯದ ಹೋರಾಟಗಾರ ನೆಲ್ಸನ್ ಮಂಡೇಲಾ ತಾವು ಗಾಂಧಿಯವರ ಬದುಕಿನಿಂದಲೇ ಪ್ರೇರಣೆ ಪಡೆದುದಾಗಿ ಹೇಳಿಕೊಂಡಿದ್ದಾರೆ. ಇಲ್ಲಿಯವರೆಗೆ ಭಾರತ ಒಳಗೊಂಡಂತೆ ಜಗತ್ತಿನಾದ್ಯಂತ ಅಸಂಖ್ಯ ಆತ್ಮಚರಿತ್ರೆಗಳು ರಚನೆಯಾಗಿವೆ. ಈ ಕ್ಷಣಕ್ಕೂ ಸೃಷ್ಟಿಯಾಗುತ್ತಲೆ ಇವೆ. ಆದರೆ ಗಾಂಧೀಜಿಯವರ 'ಸತ್ಯಾನ್ವೇಷಣೆ' ಕೃತಿಯು ಜನಮಾನಸವನ್ನು ಹಿಡಿದಿಟ್ಟುಕೊಂಡಂತೆ ಇನ್ನೊಂದು ಕೃತಿ ಕಾಣಬರುತ್ತಿಲ್ಲ.

ಗಾಂಧಿ ಅವರ ಜೊತೆ ಚಳವಳಿಯಲ್ಲಿ ಭಾಗವಹಿಸಿದ ಸಹಕಾರ್ಯಕರ್ತರು ಆತ್ಮಚರಿತ್ರೆ ಬರೆಯುವಂತೆ ಪ್ರೇರೇಪಿಸಿದ್ದರಂತೆ. ಆತ್ಮೀಯರ ಒತ್ತಾಯಕ್ಕೆ ಮಣಿದು ಬರೆಯಲು ಪ್ರಾರಂಭಿಸಿದರು. ಆದರೆ ಸ್ವಾತಂತ್ರ್ಯ ಸಂಗ್ರಾಮದ ಚಳವಳಿಯಲ್ಲಿ ಧುಮುಕಿ ಪದೇ ಪದೇ ಸೆರೆಮನೆವಾಸ, ಸಭೆ, ಸಮಾರಂಭಗಳಿಂದಾಗಿ ಬರವಣಿಗೆ ಮುಂದುವರಿಯಲಿಲ್ಲ. ಯರವಾಡಾ ಜೇಲಿನಲ್ಲಿ ಸುದೀರ್ಘ ಅವಧಿಗೆ ಬಂಧನಕ್ಕೆ ಒಳಗಾದಾಗ ಅವರ ಸಹಕೈದಿಯಾಗಿದ್ದ ಜಯರಾಮ್ ದಾಸರು ಅರ್ಧಕ್ಕೆ ಬಿಟ್ಟಿದ್ದ ಆತ್ಮಕಥೆ ಬರೆಯುವಂತೆ ಮತ್ತೆ ಪುಸಲಾಯಿಸುತ್ತಾರೆ. ಆಗಲೂ ಗಾಂಧೀಜಿಯವರು ತಾವು ಇನ್ನೊಂದು ಮಹತ್ವದ ಬರವಣಿಗೆಯಲ್ಲಿ ತೊಡಗಿದ್ದರಿಂದ ಆತ್ಮಕಥೆ ಬರೆದುಕೊಳ್ಳಲು ಪುರುಸೊತ್ತು ಇಲ್ಲವೆನ್ನುತ್ತಾರೆ. ಸಹವರ್ತಿಗಳಾದ ಸ್ವಾಮಿ ಆನಂದದಾಸರು ಮತ್ತೆ ಒತ್ತಾಯಿಸಿ ಜೀವನ ಗಾಥೆಯನ್ನು ಪುಸ್ತಕ ರೂಪದಲ್ಲಿ ಬರೆಯಬೇಕೆಂದು ಒತ್ತಾಯಿಸುತ್ತಾರೆ. ಆಗಲೂ ಗಾಂಧೀಜಿಯ ಕೃತಿ ರೂಪದಲ್ಲಿ ಬರೆಯಲಾಗದು. ಹೇಗೂ 'ನವಜೀವನ' ಪತ್ರಿಕೆಗೆ ಅಂಕಣ ಬರೆಯುತ್ತಿದ್ದರಲ್ಲ! ಅದು ಆತ್ಮಕಥೆಯೇ ಏಕಾಗಬಾರದು ಎಂದು ಭಾವಿಸಿ ಒಂದೊಂದು ಕಂತಾಗಿ ಬರೆಯಲು ಪ್ರಾರಂಭಿಸುತ್ತಾರೆ.

ಹೀಗೆ ಬರೆಯುತ್ತಿರುವಾಗಲೆ ಗಾಂಧೀಜಿಯವರ ಆತ್ಮೀಯರೊಬ್ಬರು ಆತ್ಮಕಥೆ ಬರೆದುಕೊಳ್ಳುವುದು ಪಾಶ್ಚಾತ್ಯರ ಸ್ವಭಾವ. ಪೌರ್ವಾತ್ಯರಿಗೆ ಒಗ್ಗದು. ನೀವು ಇಂದು ಒಪ್ಪಿಕೊಂಡಿರುವ ಸಿದ್ಧಾಂತ ನಾಳೆ ತಿರಸ್ಕರಿಸಬಹುದು. ನಿಮ್ಮ ಆಲೋಚನೆಗಳಲ್ಲಿ ಇದ್ದಕ್ಕಿದ್ದಂತೆ ಬದಲಾವಣೆಗಳು ಸಂಭವಿಸುವುದಿಲ್ಲ ಎನ್ನಲಾದೀತೆ? ಆದ್ದರಿಂದ ಈಗಲೆ ಆತ್ಮಚರಿತ್ರೆ ಬರೆದುಕೊಳ್ಳುವುದು ಅಷ್ಟು ಸಮಂಜಸವಲ್ಲ ಎಂದರಂತೆ. ಅದಕ್ಕೆ ಗಾಂಧೀಜಿಯವರು 'ಒಂದು ಯಥಾವತ್ತಾದ ಆತ್ಮಕಥೆ ಬರೆಯಲು ಪ್ರಯತ್ನಿಸುವುದು ನನ್ನ ಉದ್ದೇಶವಲ್ಲ. ನಾನು ಹೇಳಬಯಸುವುದು ಸತ್ಯ ಶೋಧನೆಯ ನನ್ನ ಅನೇಕ ಪ್ರಯೋಗಗಳ ಕಥೆಯನ್ನು ಮಾತ್ರ. ಈ ಎಲ್ಲ ಪ್ರಯೋಗಗಳಿಂದ ವಾಚಕರಿಗೆ ಲಾಭವಾಗದಿರದೆಂದು ನಾನು ನಂಬುತ್ತೇನೆ' ಎಂದು ಹೇಳುತ್ತಾರೆ. ಹೌದು. ಗಾಂಧಿ ಇಲ್ಲಿ ಎಲ್ಲಿಯೂ ತಮ್ಮ ನಡೆ–ನುಡಿಗಳನ್ನು ವೈಭವೀಕರಿಸಿಕೊಂಡಿಲ್ಲ. ತಮ್ಮ ಪ್ರಕೃತಿ ಸಹಜ ಬದುಕನ್ನು ಲೋಕವ್ಯವಹಾರದ ನಿಕಷಕ್ಕೆ ಒಡ್ಡಿ ತಾವು ನಂಬಿದ ಸತ್ಯಗಳೊಂದಿಗೆ ನಡೆಸುವ ಅನುಸಂಧಾನವಾಗಿ ಕಂಡಿದ್ದಾರೆ. ಮನುಷ್ಯ ಸ್ವಭಾವಗಳು ಲೋಕ ಪಾತಳಿಯಲ್ಲಿ ಪಡೆದುಕೊಳ್ಳುವ ಸುಳಿ, ಮಹಾಸುಳಿಗಳನ್ನು ಈಜಿ ಪಾರಾದ ಬಗೆಯನ್ನು ಅತ್ಯಂತ ಪ್ರಾಮಾಣಿಕವಾಗಿ ವ್ಯಕ್ತಿಸಿದ್ದಾರೆ. ಆತ್ಮಕಥೆಯನ್ನು ಬರೆದುಕೊಳ್ಳುವುದು ಅಷ್ಟು ಸುಲಭದ ದಾರಿಯಲ್ಲ. ಎಲ್ಲ ನಾಚಿಕೆ, ಮುಜುಗರವನ್ನು ಮುರಿದಿಕ್ಕಿ ಮನದ ಮೈಲಿಗೆಯನ್ನು ಜಗಜ್ಜಾಹೀರು ಮಾಡಿಕೊಳ್ಳಲು ಎಂಟೆದೆ ಬೇಕು. ಸಾಮಾನ್ಯವಾಗಿ ಆತ್ಮಕಥೆಯಲ್ಲಿ ತಮ್ಮನ್ನು ತಾವು ವೈಭವೀಕರಿಸಿಕೊಳ್ಳುತ್ತ ಎದುರಿನವರ ದೋಷ ದೌರ್ಬಲ್ಯಗಳನ್ನು, ತಮ್ಮ ಮೇಲಾದ ದಾಳಿಗಳನ್ನು ಸ್ಮಮರುಕದಲ್ಲಿ ಹೇಳಿಕೊಳ್ಳುವ ಧಾವಂತವೊಂದು ನಿಯಂತ್ರಿಸುತ್ತಿರುತ್ತದೆ. ವ್ಯಕ್ತಿಗಳು ತಮಗರಿವಿರದಂತೆ ಸ್ವ ಅನುಕಂಪದ ಸೆಳವಿಗೆ ಬಿದ್ದು ಕೊಚ್ಚಿಕೊಂಡು ಹೋಗುವುದೇ ಜಾಸ್ತಿ. ಆದರೆ ಗಾಂಧೀಜಿ ಮಾತ್ರ ಆತ್ಮಕಥೆಯುದ್ದಕ್ಕೂ ತಿಲ ಮಾತ್ರವೂ ಕೊಚ್ಚಿಕೊಂಡು ಹೋಗಿಲ್ಲವಾದ್ದರಿಂದಲೆ ಆತ್ಮಕಥೆಗಳ ಸಾಲಿನಲ್ಲಿ ಇವತ್ತಿಗೂ 'ಸತ್ಯಾನ್ವೇಷಣೆ' ವಿಶಿಷ್ಟವಾಗಿ ಮಹೋನ್ನತ ಲಬ್ಧಿಯಾಗಿ ನಿಂತಿದೆ.

ಎಲ್ಲಿಯೂ ತಮ್ಮನ್ನು ಮರೆ ಮಾಚಿಕೊಳ್ಳದೆ ತಾವು ಮಾಡಿದ ಕಳ್ಳತನ, ಸುಳ್ಳು, ಮೋಸ ಅಷ್ಟೇ ಏಕೆ ತಮ್ಮ ದೋಷ–ದೌರ್ಬಲ್ಯಗಳನ್ನು ನಿವೇದಿಸಿಕೊಂಡಿದ್ದಾರೆ. ಮನುಷ್ಯರು ಸಹಜವಾಗಿ ತಮ್ಮನ್ನು ಸಮರ್ಥಿಸಿಕೊಳ್ಳುವುದೇ ಹೆಚ್ಚು. ಗಾಂಧೀಜಿ ಮಾತ್ರ ದೈವದವರನ್ನೆ (ಓದುಗ ವರ್ಗ) ಆತ್ಮಾವಲೋಕನದ ಪನ್ನೀರಿನಲ್ಲಿ ಮಿಂದು ಝಳಝಳವಾಗಿದ್ದಾರೆ. ನಿಜಗುಣ ಶಿವಯೋಗಿಗಳು ಹೇಳಿರುವಂತೆ 'ಮನವರಿಯದ ಕಳ್ಳತನವಿಲ್ಲ' ಎಂಬುದನ್ನು ಮಹಾತ್ಮರು ಸಾಕ್ಷಾತ್ಕರಿಸಿಕೊಂಡು ನಿಚ್ಚಳವಾಗಿದ್ದಾರೆ. ಗಾಂಧೀಜಿಯವರ ಆತ್ಮಕಥೆ ಒಂದು ಕನ್ನಡಿಯಂತೆ ಓದುಗ ತಮ್ಮನ್ನು ತಾವು ಕಂಡುಕೊಳ್ಳುವ ಸಾಧನವಾಗಿ ಪರಿಣಮಿಸಿದೆ. ಗಾಂಧೀಜಿ ಇವತ್ತಿಗೂ ಜಗತ್ತಿಗೆ ಆದರ್ಶವಾಗಿದ್ದಾರೆ. ಅವರ 'ಸತ್ಯಾನ್ವೇಷಣೆ' ಪ್ರಾಮಾಣಿಕವಾಗಿ ಮತ್ತು ಸಾರ್ಥಕವಾಗಿ ಬದುಕಬೇಕೆಂಬುವರಿಗೆ ಕೈ ಹಿಡಿದು ನಡೆಸುವ ಆರ್ದ್ರಯಾನಿಯಾಗಿದೆ. ವರ್ಷ ನೂರಾದರೂ ಪ್ರತಿ ಅಕ್ಷರದಲ್ಲಿನ ಸತ್ಯ, ನಿಷ್ಠತೆಯಿಂದಾಗಿ ನಿಚ್ಚಂ ಪೊಸತಾಗಿ ತೆರೆದುಕೊಳ್ಳುತ್ತಿದೆ.

■ ಮೀನಾಕ್ಷಿ ಬಾಳಿ

## ಮಾತೇ ಮುತ್ತು

- ಗರ್ವವನ್ನು ಬಿಟ್ಟಾಗ ಸಹನೆ ಮನುಷ್ಯನಲ್ಲಿ ಮನೆ ಮಾಡುತ್ತದೆ.

  —ಮಹಾವೀರ

- ಸೋಮಾರಿತನದಲ್ಲಿ ಕಾಲ ಕಳೆಯುವುದು ಪ್ರಪಂಚದಲ್ಲೇ ಅಪಮಾನಕರವಾದ ನಡತೆ.

  —ಲಿಯೊ ಟಾಲ್‌ಸ್ಟಾಯ್

- ಆಸೆ ಎಂಬುದು ಪ್ರಾಣಾಂತಿಕ ರೋಗ. ಅಂಥ ಆಸೆಯನ್ನು ಬಿಟ್ಟರೆ ಮಾತ್ರ ಸುಖ.

  —ಮಹಾಭಾರತ

- ಇತಿಹಾಸದಿಂದ ಜನ ಏನನ್ನೂ ಕಲಿಯುವುದಿಲ್ಲ. ಕಲಿಯಲು ಯತ್ನಿಸುವುದೂ ಇಲ್ಲ.

  —ಕೆ.ಜಿ. ಇಂಗರ್‌ಸಾಲ್

- ದಾನದಿಂದ ಪ್ರಾಪಂಚಿಕ ವ್ಯವಹಾರ ಸುಲಭವಾಗುತ್ತದೆ. ತ್ಯಾಗದಿಂದ ಸಮಾಜದ ಏಳಿಗೆ ಆಗುತ್ತದೆ.

  —ಕಾಕಾ ಕಾಲೇಲ್ಕರ್

- ಒಳ್ಳೆಯ ಕನಸುಗಳು ಪುಕ್ಕಟೆ ನೋಡಿದ ಸಿನಿಮಾ ನಾಟಕಗಳಂತೆ.

  —ದ.ರಾ. ಬೇಂದ್ರೆ